ಅ) ತುರುವೇಕೆರೆ ತಾಲ್ಲೂಕಿನಲ್ಲಿ ಸರ್ಕಾರಿ ಬಸ್ ಡಿಪೋ ಇದ್ದು, ನೂರಾರು ಬಸ್‌ಗಳ ವ್ಯವಸ್ಥೆ ಇದ್ದರೂ ಸಹ ಖಾಸಗಿ ಬಸ್‌ಗಳು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸಿ ಸರ್ಕಾರಿ ಬಸ್‌ಗಳೊಂದಿಗೆ ಸ್ಪರ್ಧೆಗಿಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ಆಗುತ್ತಿರುವ ನಷ್ಟದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ ;

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು):–

ಅ) ಹೌದು.

ಆ) ಹೌದು.

ಇ) ಅನಧಿಕೃತವಾಗಿ ಆಚರಣೆ ಮಾಡುತ್ತಿರುವ ಖಾಸಗಿ ಬಸ್, ಟೆಂಪೋ, ಟ್ರ್ಯಾಕ್ಸ್, ಅಪೇ ಆಟೋಗಳು ಹಾಗೂ ಇತರೆ ಪ್ರಯಾಣಿಕರ ವಾಹನಗಳೊಂದಿಗೆ ಪೈಪೋಟಿ ನೀಡುವ ಸಲುವಾಗಿ ಕೆಲವು ಮಾರ್ಗಗಳಲ್ಲಿ ಹೆಚ್ಚುವರಿ ಸಾರಿಗೆಗಳನ್ನು ಆಚರಿಸಲಾಗುತ್ತಿದೆ.

ಕಳ್ಳಾಟಿಕೆಯಿಂದ ಆಚರಣೆಯಾಗುತ್ತಿರುವ ಖಾಸಗಿ ವಾಹನಗಳನ್ನು ತಡೆಗಟ್ಟುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮತ್ತು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಸರ್ಕಾರಿ ಮೆಡಿಕಲ್ ಕಾಲೇಜು

190 (486) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) :– ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿರುವ ಸರ್ಕಾರಿ ಮೆಡಿಕಲ್ ಕಾಲೇಜುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ರಾಜ್ಯದ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಕೋರ್ಸುಗಳು ಯಾವುವು ; (ಜಿಲ್ಲಾವಾರು ಕಾಲೇಜುಗಳ ಮಾಹಿತಿ ನೀಡುವುದು)

ಇ) ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಖಾಲಿ ಇರುವ ಖಾಯಂ ಉಪನ್ಯಾಸಕರ ಹಾಗೂ ಇತರೆ ಸಿಬ್ಬಂದಿಗಳ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಸಂಪೂರ್ಣ ಮಾಹಿತಿ ನೀಡುವುದು;

ಈ) ಸರ್ಕಾರಿ ಮೆಡಿಕಲ್ ಕಾಲೇಜುಗಳಿಗೆ ಅವಶ್ಯಕತೆ ಇರುವ ಮೂಲಭೂತ

ಸೌಕರ್ಯಗಳನ್ನು ಒದಗಿಸಲಾಗಿದೆಯೇ; ಹಾಗಿಲ್ಲದಿದ್ದಲ್ಲಿ, ಕಾರಣಗಳೇನು? (ಮಾಹಿತಿ ನೀಡುವುದು)

ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):-

ಅ) ರಾಜ್ಯದಲ್ಲಿ 10 ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳಿರುತ್ತವೆ. ಅವುಗಳು ಕೆಳಕಂಡಂತಿರುತ್ತವೆ.

1. ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.
2. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.
3. ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ.
4. ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ.
5. ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
6. ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
7. ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ.
8. ಬೆಳಗಾಂ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾಂ.
9. ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್.
10. ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು.

ಆ) ರಾಜ್ಯದ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳಲ್ಲಿ ಬೋಧಿಸಲಾಗುತ್ತಿರುವ ಕೋರ್ಸುಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

ಇ) ಹೌದು, ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿಯನ್ವಯ walk-in-interview ಮೂಲಕ ತುಂಬಲಾಗುತ್ತಿದೆ. ಬೋಧಕೇತರ ಹುದ್ದೆಗಳನ್ನು ಕಾಲಕಾಲಕ್ಕೆ–ನೇರ ನೇಮಕಾತಿ/ಹೊರಗುತ್ತಿಗೆ ಮುಖಾಂತರ ಭರ್ತಿ ಮಾಡಲಾಗುತ್ತಿದೆ.

ಈ) ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳಿಗೆ ಅವಶ್ಯಕವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಎಂ.ಟಿ. ಕೃಷ್ಣಪ್ಪ ಇವರ ಚುಕ್ಕೆ ಗುರುತಿಲ್ಲದ

ಪ್ರಶ್ನೆ ಸಂಖ್ಯೆ: 486 ಕ್ಕೆ ಅನುಬಂಧ–1

ಕರ್ನಾಟಕ ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿನ ಕೋರ್ಸ್‌ಗಳ ವಿವರಗಳು

ಕ್ರ.ಸಂ.	ಕಾಲೇಜುಗಳ ಹೆಸರು	ಕೋರ್ಸಿನ ವಿವರಗಳು	
1.	ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಬೆಂಗಳೂರು	1. ಎಂ.ಡಿ. ಅನಾಟಮಿ 2. ಎಂ.ಡಿ. ಫಿಜಿಯಾಲಜಿ 3. ಎಂ.ಡಿ. ಬಯೋಕೆಮಿಸ್ಟ್ರಿ 4. ಎಂ.ಡಿ. ಫಾರ್ಮಕಾಲಜಿ 5. ಎಂ.ಡಿ. ಪೆಥಾಲಜಿ 6. ಎಂ.ಡಿ. ಮೈಕ್ರೋ ಬಯಾಲಜಿ 7. ಎಂ.ಡಿ. ಕಮ್ಯುನಿಟಿ ಮೆಡಿಸಿನ್ 8. ಎಂ.ಡಿ. ಫೋರೆನ್ಸಿಕ್ ಮೆಡಿಸಿನ್ 9. ಎಂ.ಎಸ್. ಆಪ್ತಲ್‌ಮಾಲಜಿ 10. ಎಂ.ಎಸ್. ಇ.ಎನ್.ಟಿ. 11. ಎಂ.ಎಸ್. ಆರ್ಥೋಪೆಡಿಕ್ಸ್ 12. ಎಂ.ಡಿ. ಸ್ಕಿನ್ ಅಂಡ್ ವಿ.ಡಿ 13. ಎಂ.ಡಿ.ಆರ್.ಟಿ.	14. ಎಂ.ಡಿ. ಅನೆಸ್ತಿಶಿಯಾ 15. ಎಂ.ಡಿ. ಪಿಡಿಯಾಟ್ರಿಕ್ಸ್ 16. ಎಂ.ಡಿ. ಜನರಲ್ ಮೆಡಿಸಿನ್ 17. ಎಂ.ಎಸ್. ಜನರಲ್ ಸರ್ಜನ್ 18. ಎಂ.ಎಸ್. ಓಬಿಜಿ 19. ಎಂ.ಡಿ.ಆರ್.ಡಿ 20. ಎಂ.ಡಿ. ಸೈಕಿಯಾಟ್ರಿ **ಸುಪರ್ ಸ್ಪೆಷಾಲಿಟಿ ಕೋರ್ಸ್‌ಗಳು** 1. ಎಂ.ಸಿ.ಹೆಚ್ ಪ್ಲಾಸ್ಟಿಕ್ ಸರ್ಜರಿ 2. ಎಂ.ಸಿ.ಹೆಚ್ ಯುರಾಲಜಿ 3. ಎಂ.ಸಿ.ಹೆಚ್ ಗ್ಯಾಸ್ಟ್ರೋ ಎಂಟ್ರೋಲಜಿ 4 ಡಿ.ಎಂ. ನ್ಯೂರಾಲಜಿ 5. ಎಂ.ಸಿ.ಹೆಚ್ ಪಿಡಿಯಾಟ್ರಿಕ್ ಸರ್ಜರಿ
2.	ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು	1. ಎಂ.ಡಿ. ಅನಾಟಮಿ 2. ಎಂ.ಡಿ. ಫಿಜಿಯಾಲಜಿ 3. ಎಂ.ಡಿ. ಫಾರ್ಮಕಾಲಜಿ 4. ಎಂ.ಡಿ. ಪೆಥಾಲಜಿ 5. ಎಂ.ಡಿ. ಮೈಕ್ರೋ ಬಯಾಲಜಿ 6. ಎಂ.ಎಸ್. ಆಪ್ತಲ್‌ಮಾಲಜಿ 7. ಎಂ.ಎಸ್.ಇ.ಎನ್.ಟಿ.	8. ಎಂ.ಎಸ್. ಆರ್ಥೋಪೆಡಿಕ್ಸ್ 9 ಎಂ.ಡಿ. ಸ್ಕಿನ್ ಅಂಡ್ ವಿ.ಡಿ 10. ಎಂ.ಡಿ. ಅನೆಸ್ತಿಶಿಯಾ 11. ಎಂ.ಡಿ. ಪಿಡಿಯಾಟ್ರಿಕ್ಸ್ 12. ಎಂ.ಡಿ. ಜನರಲ್ ಮೆಡಿಸಿನ್ 13 ಎಂ.ಎಸ್. ಜನರಲ್ ಸರ್ಜನ್ 14 ಎಂ.ಎಸ್. ಓಬಿಜಿ
3.	ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ ಹುಬ್ಬಳ್ಳಿ	1. ಎಂ.ಡಿ. ಫಿಜಿಯಾಲಜಿ 2. ಎಂ.ಡಿ. ಫಾರ್ಮಕಾಲಜಿ 3. ಎಂ.ಡಿ. ಪೆಥಾಲಜಿ 4 ಎಂ.ಡಿ. ಮೈಕ್ರೋ ಬಯಾಲಜಿ 5. ಎಂ.ಡಿ. ಕಮ್ಯುನಿಟಿ ಮೆಡಿಸಿನ್ 6. ಎಂ.ಎಸ್. ಆಪ್ತಲ್‌ಮಾಲಜಿ 7. ಎಂ.ಎಸ್.ಇ.ಎನ್.ಟಿ.	8 ಎಂ.ಡಿ. ಸ್ಕಿನ್ ಅಂಡ್ ವಿ.ಡಿ 9. ಎಂ.ಡಿ. ಅನೆಸ್ತಿಶಿಯಾ 10. ಎಂ.ಡಿ. ಪಿಡಿಯಾಟ್ರಿಕ್ಸ್ 11. ಎಂ.ಡಿ. ಜನರಲ್ ಮೆಡಿಸಿನ್ 12 ಎಂ.ಎಸ್. ಜನರಲ್ ಸರ್ಜನ್ 13 ಎಂ.ಎಸ್. ಓಬಿಜಿ
4.	ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ	1. ಎಂ.ಡಿ. ಅನಾಟಮಿ 2. ಎಂ.ಡಿ. ಫಿಜಿಯಾಲಜಿ 3. ಎಂ.ಡಿ. ಫಾರ್ಮಕಾಲಜಿ 4. ಎಂ.ಡಿ. ಪೆಥಾಲಜಿ 5 ಎಂ.ಡಿ. ಮೈಕ್ರೋ ಬಯಾಲಜಿ 6. ಎಂ.ಡಿ. ಕಮ್ಯುನಿಟಿ ಮೆಡಿಸಿನ್ 7. ಎಂ.ಎಸ್. ಆಪ್ತಲ್‌ಮಾಲಜಿ 8. ಎಂ.ಎಸ್.ಇ.ಎನ್.ಟಿ.	9. ಎಂ.ಎಸ್. ಆರ್ಥೋಪೆಡಿಕ್ಸ್ 10 ಎಂ.ಡಿ. ಸ್ಕಿನ್ ಅಂಡ್ ವಿ.ಡಿ 11. ಎಂ.ಡಿ. ಅನೆಸ್ತಿಶಿಯಾ 12. ಎಂ.ಡಿ. ಪಿಡಿಯಾಟ್ರಿಕ್ಸ್ 13. ಎಂ.ಡಿ. ಜನರಲ್ ಮೆಡಿಸಿನ್ 14 ಎಂ.ಎಸ್. ಜನರಲ್ ಸರ್ಜನ್ 15 ಎಂ.ಎಸ್. ಓಬಿಜಿ **ಸುಪರ್ ಸ್ಪೆಷಾಲಿಟಿ ಕೋರ್ಸ್‌ಗಳು** 1. ಎಂ.ಸಿ.ಹೆಚ್. ಯುರಾಲಜಿ

ಕ್ರ.ಸಂ.	ಕಾಲೇಜುಗಳ ಹೆಸರು	ಕೋರ್ಸಿನ ವಿವರಗಳು	
5.	ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ, ಮಂಡ್ಯ	1. ಎಂ.ಡಿ. ಅನಾಟಮಿ 2. ಎಂ.ಡಿ. ಬಯೋಕೆಮಿಸ್ಟ್ರಿ 3. ಎಂ.ಡಿ. ಫಾರ್ಮಕಾಲಜಿ	4. ಎಂ.ಡಿ. ಪೆಥಾಲಜಿ 5. ಎಂ.ಡಿ. ಮೈಕ್ರೋ ಬಯಾಲಜಿ 6. ಎಂ.ಡಿ. ಕಮ್ಯುನಿಟಿ ಮೆಡಿಸಿನ್
6.	ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹಾಸನ	1. ಎಂ.ಡಿ. ಅನಾಟಮಿ	
7.	ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆ, ಶಿವಮೊಗ್ಗ	1. ಎಂ.ಡಿ. ಅನಾಟಮಿ 2. ಎಂ.ಡಿ. ಫಿಜಿಯಾಲಜಿ 3. ಎಂ.ಡಿ. ಬಯೋಕೆಮಿಸ್ಟ್ರಿ	4. ಎಂ.ಡಿ. ಫಾರ್ಮಕಾಲಜಿ 5. ಎಂ.ಡಿ. ಮೈಕ್ರೋ ಬಯಾಲಜಿ 6. ಎಂ.ಡಿ. ಕಮ್ಯುನಿಟಿ ಮೆಡಿಸಿನ್
8.	ಬೆಳಗಾಂ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾಂ	1. ಎಂ.ಡಿ. ಅನಾಟಮಿ 2. ಎಂ.ಡಿ. ಫಿಜಿಯಾಲಜಿ 3. ಎಂ.ಡಿ. ಬಯೋಕೆಮಿಸ್ಟ್ರಿ	4. ಎಂ.ಡಿ. ಪೆಥಾಲಜಿ 5. ಎಂ.ಡಿ. ಮೈಕ್ರೋ ಬಯಾಲಜಿ
9.	ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೀದರ್	1. ಎಂ.ಡಿ. ಅನಾಟಮಿ 2. ಎಂ.ಡಿ. ಫಿಜಿಯಾಲಜಿ	3. ಎಂ.ಡಿ. ಫಾರ್ಮಕಾಲಜಿ
10.	ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು	1. ಎಂ.ಡಿ. ಬಯೋಕೆಮಿಸ್ಟ್ರಿ 2. ಎಂ.ಡಿ. ಫಾರ್ಮಕಾಲಜಿ	3. ಎಂ.ಡಿ. ಕಮ್ಯುನಿಟಿ ಮೆಡಿಸಿನ್ 4. ಎಂ.ಡಿ. ಫೋರೆನ್ಸಿಕ್ ಮೆಡಿಸಿನ್

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಎಂ.ಟಿ. ಕೃಷ್ಣಪ್ಪ ಇವರ ಚುಕ್ಕೆ ಗುರುತಿಲ್ಲದ

ಪ್ರಶ್ನೆ ಸಂಖ್ಯೆ: 486 ಕ್ಕೆ ಅನುಬಂಧ–1

ಕರ್ನಾಟಕ ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿನ ಕೋರ್ಸ್‌ಗಳ ವಿವರಗಳು

ಕ್ರ.ಸ.	ಕೋರ್ಸಿನ ವಿವರ	ಬಿ.ಎಮ್>ಸಿ. & ಆರ್.ಐ. ಬೆಂಗಳೂರು	ಎಂ.ಎಂ.ಸಿ& ಆರ್.ಐ. ಮೈಸೂರು	ಕಿಮ್ಸ್ ಹುಬ್ಬಳ್ಳಿ	ವಿಮ್ಸ್ ಬಳ್ಳಾರಿ	ಸಿಮ್ಸ್ ಶಿವಮೊಗ್ಗ	ಹಿಮ್ಸ್ ಹಾಸನ	ಬಿಮ್ಸ್ ಬೆಳಗಾಂ	ಮಿಮ್ಸ್ ಮಂಡ್ಯ	ರಿಮ್ಸ್ ರಾಯಚೂರು	ಬ್ರಿಮ್ಸ್ ಬೀದರ್
1	ಎಂ.ಡಿ. ಅನಾಟಮಿ	7	5	5	5	–	1	–	–	2	7
2	ಎಂ.ಡಿ. ಫಿಜಿಯಾಲಜಿ	7	5	3	4	1	1	1	1	1	1
3	ಎಂ.ಡಿ. ಬಯೋಕೆಮಿಸ್ಟ್ರಿ	3	4	5	2	–	2	1	–	–	2
4	ಎಂ.ಡಿ. ಪೆಥಾಲಜಿ	4	12	6	2	4	3	2	–	–	4
5	ಎಂ.ಡಿ. ಮೈಕ್ರೋ ಬಯಾಲಜಿ	2	6	1	3	–	1	1	–	–	–
6	ಎಂ.ಡಿ. ಫಾರ್ಮಕಾಲಜಿ	4	4	5	3	–	–	–	–	–	–
7	ಎಂ.ಡಿ. ಫೋರೆನ್ಸಿಕ್ ಮೆಡಿಸಿನ್	2	2	5	3	2	3	–	1	–	–
8	ಎಂ.ಡಿ. ಕಮ್ಯುನಿಟಿ ಮೆಡಿಸಿನ್	8	5	5	2	1	5	1	–	2	–
9	ಎಂ.ಎಸ್. ಆಪ್ರಲ್‌ಮಾಲಜಿ	5	3	9	2	5	3		–	–	2
10	ಎಂ.ಎಸ್. ಇ.ಎನ್.ಟಿ.	4	9	4	2	1	4		–	1	2
11	ಎಂ.ಎಸ್. ಆರ್ಥೋಪೆಡಿಕ್ಸ್	4	10	6	2	5	6		–	3	3
12	ಎಂ.ಡಿ. ಸ್ಕಿನ್ ಅಂಡ್ ವಿ.ಡಿ	2	2	3	1	3	3		–	1	2
13	ಎಂ.ಡಿ.ಆರ್.ಟಿ.	6	1	5	1	–	–		–		
14	ಎಂ.ಡಿ. ಅನೆಸ್ತೀಶಿಯಾ	6	2	9	2	9	3		–	1	8
15	ಎಂ.ಡಿ. ಪಿಡಿಯಾಟ್ರಿಕ್ಸ್	5	1	8	1	7	7		–	4	3
16	ಎಂ.ಡಿ. ಜನರಲ್ ಮೆಡಿಸಿನ್	16	6	7	4	6	10		–	12	8
17	ಎಂ.ಎಸ್. ಜನರಲ್ ಸರ್ಜನ್	6	9	11	1	5	14		1	11	11
18	ಎಂ.ಎಸ್. ಓಬಿಜಿ	4	–	9	1	10	6		1	4	6
19	ಎಂ.ಡಿ.ಆರ್.ಡಿ	4	–	6	6	11	6		5	4	5
20	ಎಂ.ಡಿ. ಸೈಕಿಯಾಟ್ರಿ	1	1	3	3	6	3		–	2	4